

ಮಹಿಳಾದಿನ ವಿಶೇಷ

# ಅಪರೂಪದ ರಂಗರತ್ನ

ಎಪ್ಪತ್ತನಾಲ್ಕರ ಹರೆಯದಲ್ಲೂ ನಾಗರತ್ನಮ್ಮ ಅವರ ರಂಗಪ್ರೀತಿ ಮಾಸಿಲ್ಲ. ಅವರು ಈಚೆಗಷ್ಟೇ ತಮ್ಮ ಮೊಮ್ಮಗಳೊಂದಿಗೆ ನಾಟಕದಲ್ಲಿ ಅಭಿನಯಿಸಿದ್ದಾರೆ.

■ ಮಂಜುಶ್ರೀ ಎಂ. ಕಡಕೋಳ

ಓದಿನಲ್ಲಿ ಮುಂದಿದ್ದ ಆ ಹುಡುಗಿಗೆ ಶಿಕ್ಷಕಿಯಾಗಬೇಕೆಂಬ ಅದಮ್ಯ ಆಸೆಯಿತ್ತು. ಅನಿವಾರ್ಯವಾಗಿ ಓದಿಗೆ ಗುಡ್ ಬೈ ಹೇಳಿ ರಂಗಭೂಮಿಯಲ್ಲೇ ತನ್ನ ಅಸ್ತಿತ್ವ ಕಟ್ಟಿಕೊಂಡು ಕುಟುಂಬಕ್ಕೆ ಆಸರೆಯಾದ ಆ ಹುಡುಗಿಯ ಬದುಕಿನ ಪುಟಗಳೇ ಮುಂದೆ ವಿಶ್ವವಿದ್ಯಾಲಯಗಳಲ್ಲಿ ಪಠ್ಯವಾಯಿತು. ಅಂದಿನ ಆ ಬಾಲಕಿಯೇ ಇಂದಿನ ಹಿರಿಯ ರಂಗಕಲಾವಿದೆ ಮರಿಯಮ್ಮನಹಳ್ಳಿ ಕೆ. ನಾಗರತ್ನಮ್ಮ.

ಬಾಲ್ಯದಲ್ಲಿ ಅಪ್ಪ–ಅಮ್ಮ ದುಡಿದರೂ ಆರು ಮಕ್ಕಳ ಹೊಟ್ಟೆ ತುಂಬಿದ್ದು ಕಡಿಮೆಯೇ. 'ಕತ್ತಲೆ–ಬೆಳಕು' ನಾಟಕದ ಮೂಲಕದ ರಂಗಭೂಮಿಗೆ ಪದಾರ್ಪಣೆ ಮಾಡಿದ ನಾಗರತ್ನಮ್ಮನವರಿಗೆ ಮೊದಲ ರಂಗಪ್ರವೇಶವೇ ಅವಕಾಶಗಳ ಬಾಗಿಲು ತೆರೆಯಿತು. ನಾಟಕ ಪುಸ್ತಕದ ಜತೆಗೆ ಮುಂಗಡ ಹಣವನ್ನೂ ಕೊಟ್ಟು ಮುಂದಿನ ನಾಟಕಗಳಿಗೆ ಬುಕ್ ಆಗಿದ್ದ ಅವರಿಗೆ ಆ ಹಣದಲ್ಲಿ ಹೊಟ್ಟೆ ತುಂಬಾ ಊಟ ಮಾಡಬಹುದೆಂಬ ಆಸೆ. ಬಡತನ ಮೀರಲು ನೆರವಾದ ರಂಗಭೂಮಿಯಲ್ಲಿ ಶ್ರೇಷ್ಠ ನಟಿಯಾಗಿ ರೂಪುಗೊಂಡರು.

ವೃತ್ತಿನಾಟಕಗಳನ್ನು ಉಳಿಸಿ, ಬೆಳೆಸುವಲ್ಲಿ ಮಹತ್ತರ ಪಾತ್ರ ವಹಿಸಿರುವ ನಾಗರತ್ನಮ್ಮ ವೃತ್ತಿ, ಹವ್ಯಾಸಿ, ಬೀದಿನಾಟಕಗಳಷ್ಟೇ ಅಲ್ಲ, ಕಿರುತೆರೆ, ಬೆಳ್ಳಿತೆರೆಯಲ್ಲೂ ಅಭಿನಯಿಸಿದ್ದಾರೆ. ಪಾತ್ರಕ್ಕೆ ಹೇಳಿ ಮಾಡಿಸಿದ ಶರೀರ–ಶಾರೀರ ಅವರದ್ದು. ಪಾತ್ರ ಯಾವುದೇ ಇರಲಿ ಅದಕ್ಕೆ ಜೀವ ತುಂಬುವ ಮೂಲಕ ರಂಗಪ್ರೇಮಿಗಳ ಮನಸೂರೆಗೊಂಡಿರುವ ಅವರು, ಇದುವರೆಗೂ ಸುಮಾರು 18 ಸಾವಿರಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದಾರೆ.

ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ಭಕ್ತಿ ಪ್ರಧಾನ, ಹಾಸ್ಯ ನಾಟಕಗಳಲ್ಲಿ ಅಭಿನಯಿಸಿರುವ ಅವರಿಗೆ ಹೆಸರು ತಂದುಕೊಟ್ಟ ಪಾತ್ರಗಳು ಅನೇಕ. ಅವುಗಳಲ್ಲಿ 'ರಕ್ತರಾತ್ರಿ'ಯ ಉತ್ತರೆ, ಭಾನುಮತಿ, 'ಶೀಲಾವತಿ' ನಾಟಕದ ಶೀಲಾವತಿ, 'ಹೇಮರೆಡ್ಡಿ ಮಲ್ಲಮ್ಮ' ನಾಟಕದ ಮಲ್ಲಿಕಾರ್ಜುನ ಪಾತ್ರ ಪ್ರೇಕ್ಷಕರ ಮನದಲ್ಲಿ ಅಚ್ಚಳಿಯದೇ ನಿಂತಿದೆ. ಬಳ್ಳಾರಿ ಭಾಗದಲ್ಲಿ ಹೇಮರೆಡ್ಡಿ ಮಲ್ಲಮ್ಮ, ರಕ್ತರಾತ್ರಿ ನಾಟಕಗಳಲ್ಲಿ ಸುಭದ್ರಮ್ಮ ಮನ್ಸೂರು ಮತ್ತು ಕೆ. ನಾಗರತ್ನಮ್ಮ ಅವರದ್ದು ಸೂಪರ್ ಹಿಟ್ ಜೋಡಿಯಾಗಿತ್ತು.

ವೃತ್ತಿರಂಗಭೂಮಿಯ ದಿಗ್ಗಜರಾದ ದುರ್ಗಾದಾಸ್, ಎಲಿವಾಳ ಸಿದ್ದಯ್ಯ, ಏಣಗಿ ಖಾಸಿಂ ಸಾಬ್ ಅವರಂಥ ಕಲಾವಿದರ ಜತೆಗೆ ಪಾತ್ರ ಮಾಡಿದ್ದು ಅವರ ಅಭಿನಯ ಕಲೆಗೆ ಮತ್ತಷ್ಟು ಮೆರುಗು ನೀಡಿತು. ನಾಗರತ್ನಮ್ಮ ತಮ್ಮೂರಿನಲ್ಲೇ 'ಮಹಿಳಾ ವೃತ್ತಿರಂಗ ಕಲಾವಿದರ ಸಂಘ' ಕಟ್ಟಿ ಯಶಸ್ವಿಯಾದವರು. ಲಲಿತಕಲಾ ರಂಗದ ಅಧ್ಯಕ್ಷೆಯಾಗಿಯೂ ಕಾರ್ಯ ನಿರ್ವಹಿಸಿದ್ದಾರೆ.

ಹಳ್ಳಿಹಳ್ಳಿಗಳಿಗೆ ತೆರಳಿ ನಾಟಕ ಮಾಡುವುದು ಸುಲಭವಾಗಿರಲಿಲ್ಲ. ಹಳ್ಳಿಗೆ ತಲುಪಿದ ಮೇಲೆ ತಮ್ಮ ಕ್ಷೇಮ ಸಮಾಚಾರದ ಕುರಿತು ತಮ್ಮ ತಂದೆಗೆ ಪತ್ರ ಬರೆಯುತ್ತಿದ್ದರಂತೆ. ಹೆಣ್ಣುಮಕ್ಕಳು ನಾಟಕದಲ್ಲಿ ಅಭಿನಯಿಸುತ್ತಾರೆಂದರೆ ಅವರನ್ನು ಸಮಾಜ ನೋಡುತ್ತಿದ್ದ ದೃಷ್ಟಿಕೋನವೇ ಬೇರೆಯಾಗಿದ್ದ ದಿನಗಳಲ್ಲಿ ಅವರು ಎದುರಿಸಿದ್ದ ಸವಾಲುಗಳೇನೂ ಕಡಿಮೆ ಇರಲಿಲ್ಲ. ಒಂಟಿ ನಟಿ ಕೈಗೆ ಸುಲಭವಾಗಿ ಸಿಗುತ್ತಾಳೆ ಎಂದೇ ಗಂಡಸರು ಭಾವಿಸಿದ್ದ ದಿನಗಳಲ್ಲಿ ನಾಗರತ್ನಮ್ಮ ಎದುರಾದ ಸಮಸ್ಯೆಗಳನ್ನು ದಿಟ್ಟವಾಗಿ ಎದುರಿಸುತ್ತಲೇ ರಂಗಭೂಮಿಯಲ್ಲಿ ತಮ್ಮ ಛಾಪು ಮೂಡಿಸಿದ್ದು ಯಾವ ಸಿನಿಮಾ ಕಥೆಗೂ ಕಡಿಮೆಯೇನಲ್ಲ.

ಕರ್ನಾಟಕದ ರಂಗಭೂಮಿ ನಕ್ಷೆಯಲ್ಲಿ ಮರಿಯಮ್ಮನಹಳ್ಳಿಗೆ ಸ್ಥಾನ ದೊರಕಿಸಿಕೊಡುವಲ್ಲಿ ಅವರ ಪಾತ್ರ ದೊಡ್ಡದು. ಎಂ.ಎಂ. ಕಲಬುರ್ಗಿ ಅವರು ನಾಗರತ್ನಮ್ಮ ಅವರ ಕಲಾ ಬದುಕು ನೋಡಿ 'ನೀವು ಮರಿಯಮ್ಮನಹಳ್ಳಿಯ ರಂಗಸಿರಿ' ಎಂದು ಹರಸಿದ್ದರಂತೆ. ಅಂತೆಯೇ ಅವರ ಆತ್ಮಕಥನ 'ಸುಧಾ'ದಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿತ್ತು. ಮುಂದೆ ಹಂಪಿ ವಿ.ವಿ. ನಾಗರತ್ನಮ್ಮ ಅವರ ಆತ್ಮಕಥನವನ್ನೂ ಪ್ರಕಟಿಸಿತು.

ಸಣ್ಣ ಹಳ್ಳಿಯಲ್ಲಿದ್ದುಕೊಂಡೇ ನಾಗರತ್ನಮ್ಮ ಅವರು ಹೆಣ್ಣುಮಕ್ಕಳಿಗಿದ್ದ ನಿಬಂಧನೆಗಳನ್ನು ಮೀರಿ ಇತರ ಕಲಾವಿದೆಯರಿಗೆ ಮೇಲ್ಪಂಕ್ತಿ ಹಾಕಿಕೊಟ್ಟವರು. ಎಸ್. ರೇಣುಕಾ, ವೀಣಾ ಆದವಾನಿ, ಉಮಾರಾಣಿ, ಬಿ. ಶಾರದಾ, ಸರ್ವಮಂಗಳಾ, ಅಂಜಿನಮ್ಮ, ನಾಗವೇಣಿ, ಜೋಗತಿ ಮಂಜಮ್ಮ, ಶಿವಕುಮಾರಿ ಅವರಂಥ ಹಲವು ಕಲಾವಿದೆಯರ ಜತೆಗೂಡಿ ಅನೇಕ ನಾಟಕಗಳನ್ನು ಪ್ರದರ್ಶಿಸಿದ್ದಾರೆ. ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಸದಸ್ಯೆಯಾಗಿ ಅವರು ಮಾಡಿದ ಕೆಲಸಗಳಿಗೆ ಅಂದಿನ ಮಂತ್ರಿ ಎಂ.ಪಿ. ಪ್ರಕಾಶ್ ಅವರ ಮೆಚ್ಚುಗೆಗೂ ಅವರು ಪಾತ್ರರಾಗಿದ್ದರು. 'ನಾಗರತ್ನಮ್ಮ ಅವರು ಹಳೆಯ ಕಂಪನಿ ನಾಟಕ ಹಾಗೂ ಹೊಸ ಕಂಪನಿ ನಾಟಕಗಳಿಗೆ ಕೊಂಡಿಯಾಗಿದ್ದಾರೆ' ಎನ್ನುವ ಹಾ.ಮಾ. ನಾಯಕರ ಮಾತಿನ ಪ್ರತೀಕವಾಗಿರುವ ಈ ಕಲಾವಿದೆ ತಮ್ಮೊಳಗಿನ ರಂಗಪ್ರೇಮವನ್ನು ಇಂದಿಗೂ ಮುಕ್ಕಾಗದಂತೆ ಕಾಪಾಡಿಕೊಂಡಿದ್ದಾರೆ.

ನಾಗರತ್ನಮ್ಮ ಅವರ ರಂಗ ಕೈಂಕರ್ಯಕ್ಕೆ ನಾಟಕ ಅಕಾಡೆಮಿ ಪ್ರಶಸ್ತಿ, ವಾಲ್ಮೀಕಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಸಾವಿತ್ರಮ್ಮ ದೇಜಗೌ ಸೇರಿದಂತೆ ಅನೇಕ ಪ್ರಶಸ್ತಿಗಳು ಸಂದಿವೆ. ಬಳ್ಳಾರಿಯ ಶ್ರೀಕೃಷ್ಣದೇವರಾಯ ವಿ.ವಿಯ ಗೌರವ ಡಾಕ್ಟರೇಟ್, ಹಂಪಿ ವಿ.ವಿಯ ನಾಡೋಜ ಗೌರವಕ್ಕೆ ಪಾತ್ರರಾಗಿರುವ ಕೆ. ನಾಗರತ್ನಮ್ಮ ಅವರೀಗ ಪ್ರತಿಷ್ಠಿತ ಗುಬ್ಬಿ ವೀರಣ್ಣ ಪ್ರಶಸ್ತಿಗೂ ಭಾಜನರಾಗಿದ್ದಾರೆ. 74ರ ಹರೆಯದಲ್ಲೂ ನಾಗರತ್ನಮ್ಮ ಅವರೊಳಗಿನ ರಂಗಪ್ರೀತಿ ಮಾಸಿಲ್ಲ. ಶ್ರಮ, ಶ್ರದ್ಧೆ, ನಿರಂತರ ಕಲಿಕೆಯ ಮೂಲಕ ಇಂದಿಗೂ ರಂಗಭೂಮಿಯಲ್ಲಿ ಸಕ್ರಿಯರಾಗಿರುವ ನಾಗರತ್ನಮ್ಮ ಅವರು ಈಚೆಗಷ್ಟೇ ತಮ್ಮ ಮೊಮ್ಮಗಳು ಸಿಂಚನಾಳೊಂದಿಗೆ ಕುವೆಂಪು ಅವರ 'ಕಿಂದರಜೋಗಿ' ನಾಟಕದಲ್ಲಿ ಪ್ರೇಕ್ಷಕರ ಮನಸೂರೆಗೊಂಡಿದ್ದಾರೆ.

ಪ್ರತಿಕ್ರಿಯಿಸಿ: feedback@sudha.co.in